**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ ಸಿ ನಂ:39/2022**

ಸಾಕ್ಷಿಯ ಹೆಸರು: ಸೈಯದ್ ಸರ್ದಾರ್ ಸಿ.ಡಬ್ಲ್ಯು: 1
ತಂದೆಯ ಹೆಸರು: ಸೈಯದ್ ಗಫಾರ್ ಪಿ.ಡಬ್ಲ್ಯು: 2
ವಯಸ್ಸು : 49 ವರ್ಷ
ಉದ್ಯೋಗ : ವ್ಯಾಪಾರ
ವಾಸ ಸ್ಥಳ : ಮೈಸೂರು

**ದಿನಾಂಕ: 11-07-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ಚಾಸಾ-2 ನನ್ನ ತಮ್ಮ ಇರುತ್ತಾರೆ. ಅವರಿಗೆ ಕೆಎ-55-7622 ನಂಬರಿನ ಬುಲೆಟ್ ಬೈಕ್ ಇದೆ. ಈಗ ಎರಡುವರ್ಷಗಳ ಹಿಂದೆ ತರೀಕೆರೆ ಹತ್ತಿರ ಒಂದು ಫ್ಯಾಕ್ಟರಿ ಬಳಿ ವಾಹನ ಅಪಘಾತ ಆಗಿತ್ತು. ಆ ದಿನ ಆತನು ಶಿವಮೊಗ್ಗದಿಂದ ಮೈಸೂರಿಗೆ ಸದರಿ ವಾಹನದಲ್ಲಿ ಬರುತ್ತಿದ್ದನು. ಯಾರೋ ಸ್ಥಳೀಯರು ದೂರವಾಣಿ ಕರೆ ಮಾಡಿ ಅಪಘಾತ ಆದ ವಿಷಯ ತಿಳಿಸಿ ಆತನನ್ನು ಶಿವಮೊಗ್ಗದಲ್ಲಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ತಿಳಿಸಿದರು. ನಾನು ಮೈಸೂರಿನಿಂದ ಹೊರಟು ಶಿವಮೊಗ್ಗಕ್ಕೆ ಬರುವಷ್ಟರಲ್ಲಿ ಎರಡು ಗಂಟೆ ಸಮಯ ಆಗಿತ್ತು. ನಾನು ನನ್ನ ಪರಿಚಯದವರ ಮುಖಾಂತರ ನನ್ನ ತಮ್ಮನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿಕೊಂಡು ಅಂಬ್ಯೂಲೈನ್ಸ್ ಮೈಸೂರಿಗೆ ಕರೆದುಕೊಂಡು ಹೋಗಿದ್ದೆನು. ಯಾವುದೋ ಒಂದು ಲಾರಿಯಿಂದ ಅಪಘಾತ ಆಗಿದೆ ಎಂದು ಗೊತ್ತಾಯಿತು. ಲಾರಿಯ ನಂಬರ ಕೆಎ-14-1702 ಎಂದು ಗೊತ್ತಾಯಿತು. ಅಪಘಾತದ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿದ್ದೇನೆ. ದೂರನ್ನು ನಿಶಾನೆ ಪಿ.2 , ಸಾಕ್ಷಿ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

ದೂರವಾಣಿ ಕರೆಯ ಮೂಲಕ ಬಂದ ಮಾಹಿತಿ ಮೇರೆಗೆ ನಾನು ದೂರನ್ನು ದಾಖಲು ಮಾಡಿದ್ದೇನೆ. ನನಗೆ ಅಪಘಾತ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಸಿಸಿ ಟಿವಿ ಮೂಲಕ ನಂತರದಲ್ಲಿ ನೋಡಿದ್ದೇನೆ ಎಂದು ಹೇಳುತ್ತಾರೆ. ಅಪಘಾತ ಆಗಿದೆ ಎನ್ನುವ ಸಮಯದಲ್ಲಿ ಲಾಕ್ ಡೌನ್ ಇತ್ತು ಎಂದರೆ ನನಗೆ ನೆನಪಿಲ್ಲ, ಸಾಕ್ಷಿ ಓಪನ್ ಆಗಿತ್ತು ಎನ್ನುತ್ತಾರೆ. ದೂರನ್ನು ಕೊಟ್ಟಾಗ ಮಧ್ಯಾಹ್ನ 2.30 ಆಗಿರಬಹುದು ನನಗೆ ನೆನಪಿಲ್ಲ. ನನ್ನ ದೂರಿನಲ್ಲಿ ಬರೆದಿರುವ ವಿಷಯಗಳ ಬಗ್ಗೆ ಮಾಹಿತಿ ಇದೆ. ತಮ್ಮನಿಗೆ ಸಹಾಯ ಮಾಡಲು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.